ನೇಮಕ ಮಾಡಿಕೊಳ್ಳುತ್ತಿದೆ. ಇದೆಲ್ಲಾ ಆದಾಗ ಅವರನ್ನು ಕಳುಹಿಸಿಕೊಡುವ ಕೆಲಸ ಮಾಡಲಾಗುತ್ತದೆ. ಮುಖ್ಯವಾಗಿ ಮಾನ್ಯ ಸದಸ್ಯರಾದಂಥ ಹಾಲಪ್ಪನವರು ಡೆಂಗ್ಯು ಜ್ವರದ ಬಗ್ಗೆ ಪ್ರಸ್ತಾಪಿಸಿದರು. ಅದರ ಬಗ್ಗೆ ಅವರ ತಾಲ್ಲೂಕಿನಲ್ಲಿ ವಿಶೇಷವಾದಂಥ ಪ್ರಕರಣಗಳು ಕಂಡು ಬರುತ್ತಿದೆ ಎಂದು ಹೇಳಿದರು. ನಿನ್ನೆಯೂ ಕೂಡ ಮಾಹಿತಿ ಕೇಳಿದ್ದರು. ಅವರ ತಾಲ್ಲೂಕಿನಲ್ಲಿ ಒಂದು ಡೆಂಗ್ಯು ಜ್ವರದ ಪ್ರಕರಣದಿಂದ ಸಾವಾಗಿದೆ. ಅಲ್ಲಿ ಒಂದು ವಿಶೇಷ Laboratory set up ಮಾಡುವ ಬಗ್ಗೆ ಅವರು ಕೇಳಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಸರ್ವೆ ಮಾಡಿದ್ದೇವೆ. ಅಂಥ ಪ್ರಕರಣ ಕಂಡು ಬಂದ ತಕ್ಷಣವೇ laboratory ಯನ್ನು ಅಲ್ಲಿ temporary ಯಾಗಿ set up ಮಾಡುವ ದೃಷ್ಟಿಯಿಂದ ಕ್ರಮ ಕೈಗೊಳ್ಳಲಾಗುತ್ತದೆ.

14. ವಿಷಯ : ರಾಜ್ಯದಲ್ಲಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರುಗಳು ಸಮಾಜ ಕಲ್ಯಾಣ ಇಲಾಖೆಯಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು, ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಮಾತೃ ಇಲಾಖೆಗೆ ವಾಪಸ್ ಕರೆಸಿಕೊಳ್ಳದಿರುವ ಬಗ್ಗೆ.

ಶ್ರೀ ಹೆಚ್.ಎಸ್. ಪ್ರಕಾಶ್ (ಹಾಸನ) :– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರುಗಳು ಸಮಾಜ ಕಲ್ಯಾಣ ಇಲಾಖೆಯಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು, ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಮಾತೃ ಇಲಾಖೆಗೆ ವಾಪಸ ಕರೆಸಿಕೊಳ್ಳದಿರುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು ಹಾಗೂ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಹ ಶಿಕ್ಷಕರುಗಳನ್ನು ಬೋಧಕೇತರ ಕಾರ್ಯಗಳಿಗೆ/ ಕಛೇರಿಗಳಿಗೆ ನಿಯೋಜಿಸುವುದರಿಂದ ಶಾಲಾ ಕಾಲೇಜುಗಳಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಉಂಟಾಗುವ ತೊಂದರೆಯನ್ನು ಗಮನಿಸಿ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮತ್ತು ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪುಗಳ ಹಿನ್ನೆಲೆಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ : ಇಡಿ 300 ಡಿಜಿಡಿ 2011 ದಿನಾಂಕ : 08–11–2011ರಲ್ಲಿ ಪದವಿ ಪೂರ್ವ ಕಾಲೇಜುಗಳ/ಪ್ರಾಥಮಿಕ/ಪ್ರೌಢ ಶಾಲೆಗಳ ಬೋಧಕರನ್ನು ಬೋಧಕೇತರ ಕಾರ್ಯಗಳಿಗೆ/ ಕಛೇರಿಗಳಿಗೆ ನಿಯೋಜನೆ ಮಾಡುವುದನ್ನು ನಿಷೇಧಿಸಲಾಗಿದೆ. ಆದಾಗ್ಯೂ ಕೆಲವು ಬೋಧಕ

ವೃಂದದ ಅಧಿಕಾರಿಗಳು ಬೇರೆ ಬೇರೆ ಇಲಾಖೆಗಳ ಬೋಧಕೇತರ ಹುದ್ದೆಗಳಲ್ಲಿ ನಿಯೋಜನೆಯಲ್ಲಿ ಮುಂದುವರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಇಂತಹ ಅಧಿಕಾರಿ/ಸಿಬ್ಬಂದಿಗಳ ಸೇವೆಯನ್ನು ಶೀಘ್ರದಲ್ಲೇ ಮಾತೃ ಇಲಾಖೆಗೆ ಹಿಂಪಡೆಯಲು ಕ್ರಮಕೈಗೊಳ್ಳಲಾಗುತ್ತಿದೆ.

ಶ್ರೀ ಹೆಚ್.ಎಸ್. ಪ್ರಕಾಶ್ :– ಸನ್ಮಾನ್ಯ ಸಚಿವರನ್ನು ಕೇಳಿದ್ದೇವೆ, ಅವರು ಅತಿ ಶೀಘ್ರ ಎಂದು ಭಾರೀ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ಸುಮಾರು ಎರಡೂವರೆ ಮೂರು ವರ್ಷಗಳಿಂದ ಇದೇ ವಿಷಯವನ್ನು ಕೇಳುತ್ತಿದ್ದೇವೆ. ಪರಿಶಿಷ್ಟ ಪಂಗಡಗಳು, ಅಲ್ಪಸಂಖ್ಯಾತರಿರುವಂಥ ಜಾಗದಲ್ಲಿ ಜೂನಿಯರ್ ಕಾಲೇಜು ಇದೆ. ಸರ್ಕಾರ ನಿಗದಿ ಮಾಡಿರುವ ಶುಲ್ಕ 141 ರೂಪಾಯಿಗಳು, ಅಲ್ಲಿಯ principal ರವರು 300–400 ರೂಪಾಯಿಗಳಷ್ಟು ಜಾಸ್ತಿ ತೆಗೆದುಕೊಳ್ಳುತ್ತಿದ್ದಾರೆ. ಜಾಸ್ತಿ ತೆಗೆದುಕೊಳ್ಳುವುದಕ್ಕೆ ಕಾರಣ ಏನು ಎನ್ನುವ ಬಗ್ಗೆ writing ನಲ್ಲೂ ಕೊಟ್ಟಿದ್ದಾರೆ. shortage ಇದೆ ಎಂದು ನಾವು contract ಮೇಲೆ lecturers ಅನ್ನು appoint ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಇಲಾಖೆಯಲ್ಲಿ ಬಹಳಷ್ಟು ಜನ lecturers ಬೇರೆ ಬೇರೆ ಇಲಾಖೆಗಳಿಗೆ deputation ಮೇಲೆ ಹೋಗಿದ್ದಾರೆ. ಆದರೆ, ಈ ಕುರಿತಂತೆ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯ ಎರಡೂ ಕೂಡ ಎಲ್ಲೂ ಕೂಡ lecturers ಅನ್ನು deputation ಮೇಲೆ ಕಳುಹಿಸಬಾರದೆಂದು ಹೇಳಿದೆ. ಆದರೂ ಕೂಡ ಶೀಘ್ರ ಎನ್ನುವ ಪದ ಬಳಸಿ ಅತಿ ಶೀಘ್ರ ಮಾಡುತ್ತೇವೆಂದು ಹೇಳುತ್ತಾರೆ. ತಾವು ಅತಿ ಶೀಘ್ರ ಮಾಡುವುದು ಬೇಡ. ಈ ಕೂಡಲೇ deputation ಮೇಲೆ ಬೇರೆ ಇಲಾಖೆಗಳಿಗೆ ನಿಯೋಜನೆಗೊಂಡಿರುವ lecturers ಅನ್ನು ವಾಪಸ್ಸು ಕರೆಸಬೇಕು, ಅಲ್ಲಿ ಮಕ್ಕಳಿಗೆ ಅನ್ಯಾಯವಾಗದ ಹಾಗೆ class ಗಳನ್ನು ನಡೆಸುವುದಕ್ಕೆ ವ್ಯವಸ್ಥೆ ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಶಿಕ್ಷಕರ ಮತ್ತು ಉಪನ್ಯಾಸಕರ ಖಾಲಿ ಹುದ್ದೆಗಳ ವಿಷಯದಲ್ಲಿ ನಾನು ಸ್ಪಷ್ಟಪಡಿಸಿದ್ದೇನೆ. 1760 ಕ್ಕಿಂತ ಹೆಚ್ಚು ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆ ಈಗಾಗಲೇ ನಡೆದಿದೆ. ಅವರಿಗೆ ಸದ್ಯದಲ್ಲಿಯೇ ನೇಮಕಾತಿ ಆದೇಶ ಕೊಟ್ಟು, ಅವರು ಬೇಗ ಸೇವೆ ಸಲ್ಲಿಸುವ ಕೆಲಸ ಮಾಡುತ್ತಿದ್ದೇವೆ. ಅದುವರೆಗೂ ಅವರ ಕಾಲೇಜಿಗೆ ಅತಿಥಿ ಉಪನ್ಯಾಸಕರ ಸೇವೆಯ ಅವಕಾಶವನ್ನು ಮಾಡಿಕೊಡುತ್ತೇವೆ. ಉಪನ್ಯಾಸಕರನ್ನು ನಿಯೋಜನೆ ಮೇಲೆ ಬೇರೆ ಇಲಾಖೆಗೆ ಕಳುಹಿಸಿರುವ ಸಂಖ್ಯೆ ಬಹಳ ಕಡಿಮೆ ಇದೆ. ಅದರಲ್ಲೂ ವಿಶೇಷವಾಗಿ ವಯಸ್ಕರ ಶಿಕ್ಷಣ ಇಲಾಖೆ ಇಂಥ ಕಡೆಯಲ್ಲಿದ್ದಾರೆ. ಹಾಗಾಗಿ,

ಅಲ್ಲಿನ Junior College ನಲ್ಲಿ ಉಪನ್ಯಾಸಕರ ಕೊರತೆ ಇದೆ ಎನ್ನುವುದನ್ನು ಗಮನಕ್ಕೆ ತರುತ್ತಿದ್ದಾರೆ. ಅತಿ ಶೀಘ್ರದಲ್ಲಿ ಅಲ್ಲಿಗೆ ತಕ್ಷಣ ಪರ್ಯಾಯ ವ್ಯವಸ್ಥೆಯನ್ನು ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್. ಎಸ್. ಪ್ರಕಾಶ್ :–ನಿಯೋಜನೆ ಮೇರೆಗೆ ಹೋದವರನ್ನು ವಾಪಸ್ ಕರೆಸಿಕೊಳ್ಳಿ, ತೊಂದರೆ ಏನಾಗಿದೆ ? ಒಂದು ಸಾರಿ ಅವರು lecturer ಕೆಲಸ ಬಿಟ್ಟರೆ ಯಾವುದೇ ಕಾರಣಕ್ಕೂ ಪುನಃ ಆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ :– ಪ್ರಾಥಮಿಕ ಶಾಲೆಯ ಶಿಕ್ಷಕರು ಕೂಡ ಈ ರೀತಿ ನಿಯೋಜನೆ ಮೇರೆಗೆ ಬೇರೆ ಕಡೆಗೆ ಹೋಗಿದ್ದಾರೆ. ಅವರೆಲ್ಲರನ್ನೂ ವಾಪಸ್ ಮಾತೃ ಇಲಾಖೆಗೆ ಕರೆಸಿಕೊಳ್ಳಿ. ಒಂದೊಂದು ತಾಲ್ಲೂಕಿನಲ್ಲಿ 5–6 ಜನ ಶಿಕ್ಷಕರು ಬೇರೆ ಕಡೆ ಕೆಲಸ ಮಾಡುವವರಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಹಾಗೆ ಇರುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ :– ಬೇಕಾದರೆ ನಾನು ನಾಳೆ ನಿಮಗೆ ಮಾಹಿತಿ ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ನೀವು ಮಾಹಿತಿ ಕೊಟ್ಟರೆ ಗಮನಹರಿಸುತ್ತೇನೆ. ನೀವು ಹೇಳಿದ ಹಾಗೆ ಒಂದು ತಾಲ್ಲೂಕಿನಲ್ಲಿ 4, 5 ಶಿಕ್ಷಕರ ನಿಯೋಜನೆ ಇಲ್ಲ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ :– ನನ್ನ ತಾಲ್ಲೂಕಿನಲ್ಲಿದ್ದಾರೆ. ನಾನು CEO ಗೆ ಪತ್ರ ಬರೆದರೂ ಅದಕ್ಕೆ ಉತ್ತರವಿಲ್ಲ. ನಾನು ನಾಳೆ ಬೆಳಗ್ಗೆ by name ಮಾನ್ಯ ಸಚಿವರಿಗೆ ಮಾಹಿತಿ ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– High Court and Supreme Court ನಮಗೆ ಸ್ಪಷ್ಟವಾಗಿ ನಿರ್ದೇಶನಗಳನ್ನು ಕೊಟ್ಟಿದೆ. Teaching faculty ಯಾವುದಿದೆ, ಅವರನ್ನು ಬೇರೆ ಕೆಲಸಗಳಿಗೆ ನಿಯೋಜನೆ ಮಾಡಬಾರದೆನ್ನುವುದರ ಬಗ್ಗೆ ನಮಗೂ ಸ್ಪಷ್ಟತೆ ಇದೆ. ಈ Teaching faculties ಯಾವುದಿದೆ ಅವರನ್ನು ಬೇರೆ ಕೆಲಸಗಳಿಗೆ ನಿಯೋಜನೆ ಮಾಡಬಾರದು ಎನ್ನುವುದರ ಬಗ್ಗೆ ಸ್ಪಷ್ಟತೆ ನಮಗೂ ಇದೆ. ಎಲ್ಲಿ ಯಾರು ಕೆಲಸ ಮಾಡುವಂಥದ್ದರ ಬಗ್ಗೆ ಅದರಲ್ಲೂ ಪಿಯೂಸಿಯ ಬಗ್ಗೆ ಕೇಳಿದ್ದಾರೆ. ನನ್ನ ಹತ್ತಿರ ಎಲ್ಲಾ

ಅಂಕಿ ಸಂಖ್ಯೆಗಳಿವೆ. ಒಟ್ಟಾರೆ ಹೋಲಿಕೆ ಮಾಡಿ ನೋಡಿದಾಗ ಬಹಳ ಕಡಿಮೆಯಿದೆ. ಅವರು ಎಲ್ಲಿ ಇದ್ದಾರೆಂದು ನಾನು ನೋಡುತ್ತಿದ್ದೆ, ಅವರು ವಯಸ್ಕರ ಶಿಕ್ಷಣ ಇಲಾಖೆಯಲ್ಲಿ ಇದ್ದಾರೆ ಅದು ನಮ್ಮ ಇಲಾಖೆಯ ಭಾಗ ಅಲ್ಲಿಯೇ 4–8 ಜನ ಇದ್ದಾರೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಎರಡು ಜನರು ಇದ್ದಾರೆ.

ಶ್ರೀ ಹೆಚ್.ಎಸ್. ಪ್ರಕಾಶ್ :– ಎರಡು ಜನ ಅಲ್ಲ ಸಾರ್, ತಾವು ಒಂದು ಕೆಲಸ ಮಾಡಿ ಅವರನ್ನು ಅಲ್ಲಿ absorb ಮಾಡುವಂಥದ್ದು ನಡೆಯುತ್ತಿದೆ. ದಯಮಾಡಿ ತಾವು ಸ್ವಲ್ಪ ಕೇಳಿ, ರಾಜಕೀಯದಲ್ಲಿ ಇಚ್ಛಾಶಕ್ತಿ ಬಳಸುತ್ತಾರೆ. ಸಮಾಜದಲ್ಲಿ ಲೆಕ್ಚರರ್‌ರವರಿಗೆ ಅಪಾರವಾದ ಗೌರವವಿದೆ. ಆ ಕೆಲಸ ಬಿಟ್ಟು ಸಮಾಜ ಕಲ್ಯಾಣ ಇಲಾಖೆಗೆ ಹೋಗುತ್ತಾರೆಂದರೆ ಅವರು ಏನು ಕಾರಣಕ್ಕೆ ಹೋಗುತ್ತಾರೆ ? ಏಕೆ ಹೋಗಬೇಕು ? ಸಾಮಾನ್ಯವಾಗಿ ನನಗೆ ನಮ್ಮ ಗುರುಗಳಿಗೆ ನಮಗೆ ಪಾಠ ಹೇಳಿಕೊಟ್ಟ ಲೆಕ್ಚರರ್‌ರವರಿಗೆ ಭಾರಿ ಅಪಾರವಾದ ಗೌರವವನ್ನು ನಾವು ಇವತ್ತಿಗೂ ಕೊಡುತ್ತಿದ್ದೇವೆ ಮತ್ತು ಹಿಂದೆಯೂ ಕೂಡ ಕೊಟ್ಟಿದ್ದೇವೆ. ಅಂಥ ಕೆಲಸ ಬಿಟ್ಟು ಅವರು ಹೋಗುತ್ತಾರೆಂದರೆ ಅವರ ಉದ್ದೇಶ ಏನು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಈಗ ಕೋರ್ಟ್ ಆದೇಶಗಳಿವೆ, ಇವರನ್ನು ಹಿಂದಕ್ಕೆ ತರಸಿಕೊಳ್ಳುವುದಕ್ಕೆ ಬೇಕಾಗಿರುವಂಥ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು :– ಈಗ ಸದನವನ್ನು ನಾಳೆ ಬೆಳಗ್ಗೆ 10–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 8 ಗಂಟೆ 51 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 26–07–2012 ರಂದು ಗುರುವಾರ ಬೆಳಗ್ಗೆ 10–00 ಗಂಟೆಗೆ ಸಭೆ ಸೇರುವಂತೆ ನಿಶ್ಚಯಿಸಿತು)

ಪಶುಸಂಗೋಪನೆ ಇಲಾಖೆ ಪುನರಚನೆ

274 (171) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್). :– ಮಾನ್ಯ ಪಶುಸಂಗೋಪನೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿರುವ ಜಾನುವಾರುಗಳ ಸರಾಸರಿ ಸಂಖ್ಯೆ ಎಷ್ಟು ;

ಆ) ಜಾನುವಾರುಗಳನ್ನೇ ಅವಲಂಬಿಸಿರುವ ಕುಟುಂಬಗಳೆಷ್ಟು ;